# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | (56) 85 |
| ಸದಸ್ಯರ ಹೆಸರು | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 08.12.2025 |
| ಉತ್ತರಿಸುವವರು | ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಮತ್ತು ಕಡಬ ತಾಲ್ಲೂಕಿನಲ್ಲಿ ಗಡಿ ಭಾಗದ ಗ್ರಾಮೀಣ ಭಾಗಗಳಲ್ಲಿ ಕಾಡಾನೆಗಳ ನಿರಂತರ ಹಾವಳಿಯಿಂದಾಗಿ ಸತತವಾಗಿ ಅಪಾರ ಪ್ರಮಾಣದಲ್ಲಿ ಬೆಳೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಸದರಿ ತಾಲ್ಲೂಕಿನಲ್ಲಿ ಒಂದಲ್ಲ, ಒಂದು ಕಡೆ ಕಾಡಾನೆಗಳು ಪ್ರತಿದಿನ ದೊಡ್ಡ ಮಟ್ಟದಲ್ಲಿ ನಿರಂತರವಾಗಿ ಹಾನಿ ಮಾಡುತ್ತಿದ್ದು, ಅಪಾರ ಪ್ರಮಾಣದಲ್ಲಿ ಬಾಳೆಗಿಡ, ತೆಂಗು ಮತ್ತು ಅಡಕೆ ಮರಗಳನ್ನು ಮುರಿದು ಹಾಕಿರುವುದುದರಿಂದ, ಬಹುವಾರ್ಷಿಕ ಬೆಳೆಗಳನ್ನು ಕಳೆದುಕೊಂಡು ಕೃಷಿಕರು ಅತ್ಯಂತ ಸಂಕಷ್ಟಕ್ಕೆ ಸಿಲುಕಿದ್ದರೂ ಸಹ ಈ ತೊಂದರೆಯನ್ನು ತಪ್ಪಿಸಲು ಸರ್ಕಾರ ಇದುವರೆಗೆ ಯಾವುದೇ ಸೂಕ್ತ ಹಾಗೂ ಶಾಶ್ವತ ಪರಿಹಾರದ ಕ್ರಮಗಳನ್ನು ಕೈಗೊಳ್ಳದಿರಲು ಕಾರಣಗಳೇನು: | • ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ಕಡಬ ತಾಲ್ಲೂಕುಗಳು ಹಾಗೂ ಕುದುರೆಮುಖ ವನ್ಯಜೀವಿ ವಿಭಾಗ, ಮೂಡಿಗೆರೆ, ಸಕಲೇಶಪುರ, ಬಿಸಿಲೆ, ಪುಷ್ಪಗಿರಿ ವನ್ಯಜೀವಿಧಾಮ, ತಲಕಾವೇರಿ ವನ್ಯಜೀವಿಧಾಮ, ಸಂಪಾಜೆ ಹಾಗೂ ಕೇರಳ ರಾಜ್ಯದ ಗಡಿಗೆ ಹೊಂದಿಕೊಂಡು ವನ್ಯಜೀವಿಗಳ ನೈಸರ್ಗಿಕ ಸಂಚಲನ ಪ್ರದೇಶವಾಗಿರುತ್ತದೆ. ಮುಂದುವರಿದು, ಚಾರ್ಮಡಿಯಿಂದ ಸುಳ್ಯ ವ್ಯಾಪ್ತಿಗೆ 95 ಕಿ.ಮೀ. ಉದ್ದದ ಆನೆ ಸಂಚರಿಸುವ ನೈಸರ್ಗಿಕ ಪಥವಿರುತ್ತದೆ. ಈ ಪಥಗಳ ಇಕ್ಕೆಲಗಳಲ್ಲಿ ಜನವಸತಿ ಪ್ರದೇಶ ಹಾಗೂ ಕೃಷಿ ಚಟುವಟಿಕೆಗಳು ಕೂಡಾ ಒಳಗೊಂಡಿರುತ್ತದೆ.<br>• ಬೆಳ್ತಂಗಡಿ ತಾಲೂಕಿನಲ್ಲಿ 18 ಮತ್ತು ಕಡಬ ತಾಲೂಕಿನಲ್ಲಿ 74 ಒಟ್ಟು 92 Enclosure ಗಳಿದ್ದು ಇವೆಲ್ಲವೂ ಕಾಡಿನ ನಡುವೆ ವಾಸಿಸುವ ಜನವಸತಿ ಪ್ರದೇಶಗಳಾಗಿದ್ದು ದಿನನಿತ್ಯ ಮಾನವ-ವನ್ಯಪ್ರಾಣಿ ಸಂಘರ್ಷಕ್ಕೆ ಸಿಲುಕಿದಂತಾಗಿರುತ್ತದೆ.<br>• ದಕ್ಷಿಣ ಕನ್ನಡ ಜಿಲ್ಲೆಯನ್ನು ಸಂಪರ್ಕಿಸುವ ಮುಖ್ಯ ಹೆದ್ದಾರಿಗಳಾದ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 73 (ಚಾರ್ಮಾಡಿ ಘಾಟ್), ರಾಷ್ಟ್ರೀಯ ಹೆದ್ದಾರಿ ಸಂಖ್ಯೆ75 (ಶಿರಾಡಿ ಘಾಟ್), ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 273 (ಮಾಣಿ-ಮಡಿಕೇರಿ) ಇವೆಲ್ಲವೂ ದಟ್ಟ ಅರಣ್ಯ ಪ್ರದೇಶಗಳಲ್ಲಿ ಹಾದುಹೋಗುತ್ತಿರುವುದಲ್ಲದೇ, ಆನೆಗಳು ಸಂಚರಿಸುವ ನೈಸರ್ಗಿಕ ಪಥ ಕೂಡಾ ಆಗಿರುತ್ತದೆ. ಹಲವಾರು ಬಾರಿ ಆನೆಗಳು ಅಥವಾ ಕಾಡುಕೋಣಗಳು ರಸ್ತೆ ದಾಟುವ ಸಂದರ್ಭದಲ್ಲಿ ವಾಹನಗಳ ಸಂಚಾರವನ್ನು ತಡೆದು ಪ್ರಾಣಿಗಳು ರಸ್ತೆ ದಾಟುವುದಕ್ಕೆ ಅವಕಾಶ ನೀಡಿರುವಂತಹ ಪ್ರಕರಣಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಹಾಗೂ ಕೆಲವು ಪ್ರಕರಣಗಳಲ್ಲಿ ವಾಹನಗಳಿಗೆ ಹಾನಿ ಮಾಡಿದಂತಹ ಪ್ರಕರಣಗಳು ದಾಖಲಾಗಿರುತ್ತದೆ.<br>• ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಆನೆ ಸೆರೆ ಹಿಡಿಯುವ ಹಾಗೂ ಹಿಮ್ಮೆಟ್ಟಿಸುವ ಕಾರ್ಯಾಚರಣೆ ನಡೆಯುತ್ತಿದ್ದು, ಹಾಗೂ ಬೇಸಿಗೆಯಲ್ಲಿ ಬೆಂಕಿ ಬಿದ್ದ ಸಂದರ್ಭಗಳಲ್ಲಿ ಬೆಟ್ಟ-ಗುಡ್ಡಗಳಿಂದ ಇಳಿದು ಬರುತ್ತಿರುವುದರಿಂದ ಈ ಪ್ರದೇಶಗಳಲ್ಲಿ ಕಾಡಾನೆಗಳ ಚಲನವಲನಗಳು ಹೆಚ್ಚುತ್ತಿರಲು ಕಾರಣವಾಗಿದೆ.<br>• ಆನೆಗಳು ಸಂಚರಿಸುವ ನೈಸರ್ಗಿಕ ಪಥಗಳಲ್ಲಿ ಕೆಲವು ವರ್ಷಗಳಿಂದ ಹಲವಾರು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಇದರಲ್ಲಿ ಮುಖ್ಯವಾಗಿ ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಕಾಮಗಾರಿಯು ನಿರಂತರವಾಗಿ ಹಗಲು-ರಾತ್ರಿ ನಡೆಯುತ್ತಿವೆ. ಇದಲ್ಲದೇ ಈ ಅಭಿವೃದ್ಧಿ ಕಾಮಗಾರಿಗಳಿಗೆ ಅರಣ್ಯ ಭೂಮಿಗಳು ಬಳಕೆಯಾಗುತ್ತಿದ್ದು, ಅರಣ್ಯ ಪ್ರದೇಶಗಳು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಕ್ಷೀಣಿತವಾಗುತ್ತಿದ್ದು, ಆವಾಸ್ಥಾನದ ವಿಭಜನೆ ಯಿಂದಾಗಿ ಕಾಡಾನೆಗಳು ಹೊಸ ಪ್ರದೇಶಗಳಿಗೆ ಸಂಚಾರ ಮಾಡುತ್ತಿದ್ದು, ಸ್ಥಳೀಯ ಕೃಷಿ ಭೂಮಿಗಳಿಗೆ ಹಾನಿಯುಂಟಾಗುತ್ತಿದೆ. ಇದರಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಮತ್ತು ಕಡಬ ತಾಲ್ಲೂಕಿನಲ್ಲಿ ಗಡಿ ಭಾಗದ ಗ್ರಾಮೀಣ ಭಾಗಗಳಲ್ಲಿ ಕಾಡಾನೆಗಳ ಹಾವಳಿಯಿಂದಾಗಿ ಬೆಳೆ ಹಾನಿಯಾಗುತ್ತಿರುತ್ತದೆ.<br><br>ಸದರಿ ತಾಲ್ಲೂಕಿನಲ್ಲಿ ಕಾಡಾನೆ ದಾಳಿಯಿಂದ ಬಾಳೆಗಿಡ, ತೆಂಗು ಮತ್ತು ಅಡಿಕೆ ಮರಗಳು ಹಾನಿಗೊಳಗಾಗಿ ಬಹುವಾರ್ಷಿಕ ಬೆಳೆಗಳನ್ನು ಕಳೆದುಕೊಂಡು ಕೃಷಿಕರಿಗೆ ಈ ಕೆಳಗಿನ ಸರಕಾರಿ ಆದೇಶದಂತೆ ಪರಿಹಾರವನ್ನು ನೀಡಲಾಗುತ್ತಿದೆ.<br><br>1. ಸರಕಾರಿ ಆದೇಶ ಸಂಖ್ಯೆ ಇ-ಸಂಖ್ಯೆ ಅಪಜೀ.156/ ಎಫ್‌ಡಬ್ಲ್ಯುಎಲ್. 2022 ಬೆಂಗಳೂರು ದಿನಾಂಕ:18-01-2023 (ಬೆಳೆ ಹಾನಿ ಪ್ರಕರಣ)<br>2. ಅಪಜೀ.114/ಎಫ್‌ಡಬ್ಲ್ಯುಎಲ್. 2022 ಬೆಂಗಳೂರು ದಿನಾಂಕ:15-12-2022 (ಮಾನವ ಗಾಯ)<br>3. ಸರಕಾರಿ ಆದೇಶ ಸಂಖ್ಯೆ ಇ-ಸಂಖ್ಯೆ ಅಪಜೀ.114/ ಎಫ್‌ಡಬ್ಲ್ಯುಎಲ್. 2022 ಬೆಂಗಳೂರು ದಿನಾಂಕ:29-04-2025 (ಮಾನವ ಸಾವು ಪ್ರಕರಣ)<br><br>ಕೃಷಿಕರಿಗೆ ಪರಿಹಾರ ಧನವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಮುಂದುವರಿದು ಕಾಡಾನೆಗಳ ದಾಳಿಯನ್ನು ತಡೆಗಟ್ಟಲು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ಉಪ್ಪಿನಂಗಡಿ, ಪುತ್ತೂರು, ಪಂಜ, ಸುಳ್ಯ ಮತ್ತು ಸುಬ್ರಹ್ಮಣ್ಯ ವ್ಯಾಪ್ತಿಗೆ ಒಳಪಡುವ 95.00 ಕಿ.ಮೀ. ಉದ್ದದ ಆನೆ ಸಂಚರಿಸುವ ನೈಸರ್ಗಿಕ ಪಥದ ಇಕ್ಕೆಲಗಳಲ್ಲಿ ಜನವಸತಿ ಪ್ರದೇಶ ಹಾಗೂ ಕೃಷಿ ಚಟುವಟಿಕೆಗಳಳಗಳಿಗೆ ಕಾಡಾನೆಗಳ ದಾಳಿಯನ್ನು ನಿಯಂತ್ರಿಸಲು ಅನುವಾಗುವಂತೆ ***"ದಕ್ಷಿಣಕನ್ನಡ ಜಿಲ್ಲಾ ಆನೆ ಕಾರ್ಯಪಡೆ"*** ಯನ್ನು ರಚಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |
| ಇ) | ಕಳೆದ 3 ವರ್ಷಗಳಲ್ಲಿ ಸದರಿ ತಾಲ್ಲೂಕಗಳಲ್ಲಿ ಕಾಡಾನೆ ದಾಳಿಯಿಂದಾಗಿ ಬೆಳೆ ಹಾನಿಯಾಗಿರುವ ಎಷ್ಟು ಪ್ರಕರಣಗಳು ವರದಿಯಾಗಿವೆ: ಸಂಭವಿಸಿರುವ ನಷ್ಟದ ವಿವರಗಳೇನು: ಹಾಗೂ ಸದರಿ ಪ್ರಕರಣಗಳಲ್ಲಿ ಸರ್ಕಾರ ತೆಗೆದುಕೊಂಡಿರುವ ಪರಿಹಾರದ ಕ್ರಮಗಳೇನು: | ಕಳೆದ 03 ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಮತ್ತು ಕಡಬ ತಾಲ್ಲೂಕಿನಲ್ಲಿ ಕಾಡಾನೆ ದಾಳಿಯಿಂದಾದ ನಷ್ಟಕ್ಕೆ ಈ ಕೆಳಗಿನಂತೆ ಪರಿಹಾರ ಧನವನ್ನು ಪಾವತಿಸಲಾಗಿರುತ್ತದೆ. |

**ಬೆಳ್ತಂಗಡಿ ತಾಲ್ಲೂಕು** (ರೂಗಳಲ್ಲಿ)

| ಕ್ರ ಸಂ | ವರ್ಷ | ಬೆಳೆ ಪರಿಹಾರ | | ಜಾನುವಾರು ಸಾವು | | ಮಾನವ ಸಾವು | | ಮಾನವ ಗಾಯ | | ಆಸ್ತಿ ನಷ್ಟ | | ಮಾಶಾಸನ | | ಒಟ್ಟು | |
|---|---|---|---|---|---|---|---|---|---|---|---|---|---|---|---|
| | | ಪ್ರಕರಣ | ಮೊಬಲಗು | ಪ್ರಕರಣ | ಮೊಬಲಗು | ಪ್ರಕರಣ | ಮೊಬಲಗು | ಪ್ರಕರಣ | ಮೊಬಲಗು | ಪ್ರಕರಣ | ಮೊಬಲಗು | ಪ್ರಕರಣ | ಮೊಬಲಗು | ಪ್ರಕರಣ | ಮೊಬಲಗು |
| **ಮಂಗಳೂರು ವಿಭಾಗ:** | | | | | | | | | | | | | | | |
| 01 | 2022-23 | 41 | 1027400 | - | - | - | - | - | - | - | - | - | - | **41** | **1027400** |
| 02 | 2023-24 | 38 | 1290424 | 01 | 20000 | - | - | - | - | - | - | - | - | **39** | **1310424** |
| 03 | 2024-25 | 59 | 1484676 | - | - | - | - | 01 | 30000 | 04 | 18100 | - | - | **64** | **1532776** |
| 04 | 2025-26 | 44 | 1142135 | - | - | 01 | 2000000 | - | - | 02 | 32000 | 01 | 13935 | **48** | **3188070** |
| **ಕುದುರೆಮುಖ ವನ್ಯಜೀವಿ ವಿಭಾಗ, ಕಾರ್ಕಳ:** | | | | | | | | | | | | | | | |
| | 2022-23 | 4 | 33120 | - | - | - | - | - | - | - | - | - | - | **4** | **33120** |
| **ಬೆಳ್ತಂಗಡಿ ತಾಲ್ಲೂಕು ಒಟ್ಟು** | | **186** | **4977755** | **01** | **20000** | **01** | **2000000** | **01** | **30000** | **06** | **50100** | **01** | **13935** | **196** | **7091790** |
| **ಕಡಬ ತಾಲ್ಲೂಕು** | | | | | | | | | | | | | | | |
| **ಮಂಗಳೂರು ವಿಭಾಗ:** | | | | | | | | | | | | | | | |
| 01 | 2022-23 | 78 | 1577214 | - | - | 03 | 3000000 | 04 | 179142 | - | - | - | - | **85** | **4756356** |
| 02 | 2023-24 | 95 | 1963668 | - | - | 01 | 1500000 | - | - | - | - | 03 | 164666 | **99** | **3628334** |
| 03 | 2024-25 | 119 | 2257742 | - | - | - | - | - | - | 02 | 30000 | 03 | 144000 | **124** | **2431742** |
| 04 | 2025-26 | 66 | 1196216 | - | - | - | - | - | - | 04 | 22700 | 03 | 84000 | **73** | **1302916** |
| **ಕುದುರೆಮುಖ ವನ್ಯಜೀವಿ ವಿಭಾಗ, ಕಾರ್ಕ:ಳ** | | | | | | | | | | | | | | | |
| | 2024-25 | 3 | 89300 | - | - | - | - | - | - | - | - | - | - | **3** | **89300** |
| **ಕಡಬ ತಾಲ್ಲೂಕು ಒಟ್ಟು** | | **361** | **7084140** | - | - | **04** | **4500000** | **04** | **179142** | **06** | **52700** | **09** | **392666** | **384** | **12208648** |

**ಷರಾ:- 2022-23ನೇ ಸಾಲಿನಲ್ಲಿ ಕಡಬ ತಾಲೂಕಿನಲ್ಲಿ ಮಾನವ ಸಾವಿಗೆ ಸಂಬಂಧಪಟ್ಟ 03 ಪ್ರಕರಣಗಳಲ್ಲಿ 02 ಪ್ರಕರಣಗಳಿಗೆ ತಲಾ ರೂ.15.00 ಲಕ್ಷದಂತೆ ಪರಿಹಾರ ಧನ ಪಾವತಿಸಲಾಗಿದ್ದು, ಶ್ರೀ ರಮೇಶ್ ರೈ, ಬಿನ್. ತಿಮ್ಮಣ್ಣ ರೈ ಇವರು ಕಾಡಾನೆ ದಾಳಿಯಿಂದ ಮೃತಪಟ್ಟಿದ್ದು, ಸದ್ರಿಯವರು ಅವಿವಾಹಿತರಾಗಿರುತ್ತಾರೆ ಅವರ ತಂದೆ ತಾಯಿಗಳು ಮೃತ ಪಟ್ಟಿರುವುದರಿಂದ ಮೃತರಿಗೆ ಸಂಬಂಧಪಟ್ಟ ರಕ್ತ ಸಂಬಂಧಿಗಳು ಯಾರು ಇಲ್ಲವೆಂದು ತಹಶೀಲ್ದಾರ್, ಕಡಬ ಇವರು ವರದಿಸಿರುವುದರಿಂದ ಪರಿಹಾರಧನವನ್ನು ಪಾವತಿಸಿರುವುದಿಲ್ಲ.**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಈ) | ಯಾವ ಕಾಲಮಿತಿಯೊಳಗೆ ಕಾಡಾನೆಗಳಿಗೆ ಹಾವಳಿ ತಡೆಗೆ ಶಾಶ್ವತ ಕ್ರಮಗಳನ್ನು ಕೈಗೊಳ್ಳಲಾಗುವುದು? | ಮಾನವ ಹಾಗೂ ಕಾಡಾನೆಗಳ ಸಂಘರ್ಷ ನಿಯಂತ್ರಿಸಲು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.<br>1. ಕಾಡಾನೆಗಳ ಹಾವಳಿ ಹೆಚ್ಚಾಗಿರುವ ಪ್ರದೇಶದಲ್ಲಿ ಜನ ಸಂಪರ್ಕ ಸಭೆಯನ್ನು ಕರೆದು ಜನರಲ್ಲಿ ಅರಿವು ಮೂಡಿಸಿ, ವನ್ಯಪ್ರಾಣಿಗಳ ಬಗ್ಗೆ ಜಾಗೃತಿ ಹಾಗೂ ಸಹಬಾಳ್ವೆ ಮೂಡಿಸುವ ಸಭೆ / ಕಾರ್ಯಾಗಾರ ಏರ್ಪಡಿಸುವುದು.<br>2. ಬೆಳೆ ಹಾನಿ ಪ್ರಕರಣಗಳಲ್ಲಿ ಕೂಡಲೇ ಸರಕಾರದ ಆದೇಶದ ಪ್ರಕಾರ ಪರಿಹಾರವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ಪಾವತಿಸುವುದು.<br>3. ರೈತರಿಗೆ ಸಬ್ಸಿಡಿ ದರದಲ್ಲಿ ಸೋಲಾರ್ ಬೇಲಿ ನಿರ್ಮಾಣ ಮಾಡಲು ಉತ್ತೇಜನ ನೀಡಲಾಗುತ್ತಿದೆ ಹಾಗೂ ಅರಣ್ಯದ ಅಂಚಿನಲ್ಲಿ ಬರುವ ಖಾಸಗಿ ಜಮೀನುಗಳ ಸುತ್ತಾ ಸರಕಾರದ ವತಿಯಿಂದ ದೊರಕುವ ಶೇ. 50 ಸಬ್ಸಿಡಿಯನ್ನು ಬಳಸಿಕೊಂಡು ಸೌರಶಕ್ತಿ ಬೇಲಿಯನ್ನು ನಿರ್ಮಿಸಲಾಗುತ್ತಿದೆ.<br>4. ಅರಣ್ಯ ರಕ್ಷಣೆ ಕ್ಯಾಂಪಿನ ಸಿಬ್ಬಂದಿಗಳನ್ನು ಆನೆ ಹಾವಳಿ ಸಮಯದಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ.<br>5. ಆನೆ ನಿರೋಧಕ ಕಂದಕ ತೋಡುವುದು, ಹಳ್ಳ ತೊರೆಗಳು ಬರುವಲ್ಲಿ ವಿಶೇಷ ವಿನ್ಯಾಸದ ಕಾಂಕ್ರಿಟ್ ರಚನೆ ಮತ್ತುಸೋಲಾರ್ ಟೆಂಟೆಕಲ್ ಬೇಲಿಯನ್ನು ಮಾಡಲಾಗುತ್ತದೆ.<br>6. ಮಡಿಕೇರಿ ವಿಭಾಗದಿಂದ ಎಲಿಫೆಂಟ್ ಟ್ರಾಕರ್ಸ್‌ಗಳನ್ನು ಕರೆಸಿ ಹಾಗೆಯೇ, ನಾಗರಹೊಳೆ / ಮಡಿಕೇರಿ ವಿಭಾಗಗಳಿಂದ ನುರಿತ ಆನೆ ಕಾವಡಿಗಳನ್ನು ಮತ್ತು ವೈದ್ಯರನ್ನು ಕರೆಯಿಸಿ ಊರಿಗೆ ಬಂದ ಕಾಡಾನೆಯನ್ನು ಕಾಡಿಗೆ ಹಿಮ್ಮೆಟ್ಟಿಸಿರುವ ಹಾಗೂ ಸೆರೆಹಿಡಿಯುವ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.<br>7. ಆನೆ ಸಂಚರಿಸುವ ಪ್ರದೇಶಗಳಲ್ಲಿ ಸೂಚನಾ ಫಲಕವನ್ನು ಅಳವಡಿಸಲಾಗುತ್ತಿದೆ.<br>8. ವಲಯಗಳಲ್ಲಿ ಕಾಲಭೈರವೇಶ್ವರ ರಾತ್ರಿ ಗಸ್ತು ತಂಡವನ್ನು ರಚಿಸಿಕೊಂಡು ನಿರಂತರವಾಗಿ ಗಸ್ತು ಸಂಚರಿಸಿ ಕಾಡಾನೆ ಹಾವಳಿಯನ್ನು ನಿಯಂತ್ರಿಸುವ ಬಗ್ಗೆ ಈಗಾಗಲೇ ಕ್ರಮಕೈಗೊಳ್ಳಲಾಗಿದೆ.<br>9. ಕಾಡಾನೆ ಹಾವಳಿ ಇರುವ ಗ್ರಾಮಗಳಲ್ಲಿ ಸ್ಥಳೀಯ ಗ್ರಾಮಸ್ಥರ, ಅಧಿಕಾರಿಗಳ ಸಿಬ್ಬಂದಿಗಳ ವಾಟ್ಸಪ್ ಗ್ರೂಪ್ ರಚಿಸಿ, ಆನೆ ಹಾವಳಿ ಬಗ್ಗೆ ಸಂದೇಶವನ್ನು ಸ್ಥಳೀಯರಿಗೆ ರವಾನಿಸಲು ಕ್ರಮಕೈಗೊಳ್ಳಲಾಗಿದೆ. ಅಲ್ಲದೇ ಈ ವಿಭಾಗಕ್ಕೆ Elephant Task Force ಪಡೆಯನ್ನು ನಿಯೋಜಿಸುವ ಬಗ್ಗೆ ಪ್ರಸ್ತಾವನೆಯನ್ನು ಸಹ ಸಲ್ಲಿಸಲಾಗಿದ್ದು ಪರಿಶೀಲನೆಯಲ್ಲಿರುತ್ತದೆ.<br><br>**ತಂತ್ರಜ್ಞಾನ ಬಳಕೆ:**<br><br>• ವಿವಿಧ ವಿಭಾಗಗಳಿಂದ ಲಭ್ಯವಾಗುವ ಮಾಹಿತಿಯನ್ನು ರಿಯಲ್-ಟೈಮ್‌ನಲ್ಲಿ ಸಂಗ್ರಹಿಸಿ, ವಿಶ್ಲೇಷಿಸಿ, ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲು ಹಾಗೂ ಕ್ಷೇತ್ರ ಮಟ್ಟದ ಚಟುವಟಿಕೆಗಳನ್ನು ಸಮನ್ವಯಗೊಳಿಸಿ, ತುರ್ತು ಘಟನೆಗಳಿಗೆ ತಕ್ಷಣ ಪ್ರತಿಕ್ರಿಯಿಸಲು ಕೇಂದ್ರ ಸ್ಥಾನದಲ್ಲಿ ಸಂಯೋಜಿತ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್(ICCC) ಹಾಗೂ 11 ವಿಭಾಗಗಳಲ್ಲಿ ವಿಭಾಗೀಯ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್(DCCC) ಸ್ಥಾಪಿಸಲಾಗುತ್ತಿದೆ.<br>• ರೇಡಿಯೋ ಕಾಲರ್ ಅಳವಡಿಸಿರುವ ಕಾಡಾನೆ, ಹುಲಿ, ಚಿರತೆಗಳ ಚಲನ-ವಲನಗಳನ್ನು ದಿನನಿತ್ಯ ಗಮನಿಸಲು ಇಲಾಖಾವತಿಯಿಂದ "ಹೆಜ್ಜೆ" ಎಂಬ ಡ್ಯಾಶ್ ಬೋರ್ಡ್ ನ್ನು ತಯಾರಿಸಲಾಗಿದೆ.<br>• ಕಾಡಂಚಿನ ಗ್ರಾಮಗಳಲ್ಲಿ ವನ್ಯಪ್ರಾಣಿಗಳು ಬಂದಂತಹ ಸಂದರ್ಭಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ ಮಾಹಿತಿ ನೀಡಲು Advance alert system ಅನ್ನು ತಯಾರಿಸಲಾಗಿದೆ. ಇದರಿಂದಾಗಿ ಸಾರ್ವಜನಿಕರಿಗೆ ನೇರವಾಗಿ ಸಂದೇಶಗಳನ್ನು ಕಳುಹಿಸಲಾಗುತ್ತಿದೆ.<br>• ಕಾಡಾನೆ ಇರುವ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ ಮಾಹಿತಿ ನೀಡಲು ಡಿಜಿಟಲ್ ಬೋರ್ಡ್‌ಗಳನ್ನು ಅಳವಡಿಸಲಾಗಿದೆ.<br>• ಅರಣ್ಯದಂಚಿನ ಆಯ್ದ ಪ್ರದೇಶಗಳಲ್ಲಿ "**AI**" Based Camera ಗಳನ್ನು ಅಳವಡಿಸಲಾಗಿದ್ದು, ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ.<br>• ಡ್ರೋನ್‌ಗಳ ಮುಖಾಂತರ ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ.<br><br>• **ಇ-ಪರಿಹಾರ:** ಈ ಆನ್‌ಲೈನ್ ಆಪ್ಲಿಕೇಶನ್ ಬೆಳೆ, ಆಸ್ತಿ ಮತ್ತು ಜೀವಹಾನಿಗಳಿಗೆ ಪರಿಹಾರದ ಪ್ರಕರಣಗಳನ್ನು ಪ್ರಕ್ರಿಯೆಗೊಳಿಸುತ್ತದೆ, ಪರಿಹಾರ ಪ್ರಕ್ರಿಯೆಯನ್ನು ಸುಗಮಗೊಳಿಸುತ್ತದೆ ಮತ್ತು ಆಡಳಿತ ವಿಳಂಬವನ್ನು ಕಡಿಮೆ ಮಾಡುತ್ತದೆ. ಆಪ್ಲಿಕೇಶನ್ ನಲ್ಲಿ ದಾಖಲಿಸಲಾದ Backend Data ದಿಂದ ಸಂಘರ್ಷದ ಕಾರಣಗಳು, ಹೆಚ್ಚಿನ ಸಂಘರ್ಷದ ಪ್ರದೇಶಗಳು ಮತ್ತು ಸಂಘರ್ಷ-ಉಂಟುಮಾಡುವ ಪ್ರಾಣಿಗಳನ್ನು ವಿಶ್ಲೇಷಿಸಲು ಸಹಾಯ ಮಾಡುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಕಾಡಾನೆಗಳ ದಾಳಿಯನ್ನು ನಿಯಂತ್ರಿಸಲು ಅನುವಾಗುವಂತೆ ***"ದಕ್ಷಿಣಕನ್ನಡ ಜಿಲ್ಲಾ ಆನೆ ಕಾರ್ಯಪಡೆ"*** ಯನ್ನು ರಚಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |

**ಇ-ಸಂಖ್ಯೆ: ಅಪಜೀ 324 ಎಫ್‌ಡಬ್ಲ್ಯೂಎಲ್ 2025**

(ಈಶ್ವರ ಬಿ. ಖಂಡ್ರೆ)
ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು